Mysore" movements (details to be furnished districtwar along with names of such officials);

(*b*) of them, the number of officials that were reinstated on their request and without their request;

(*c*) whether any representations have been received by Government from such officials requesting that the period of their absence from the date of their dismissal up to the date of reinstatement be added on to their service; what action has been taken in the matter?

A—**The Hon'ble Sri K. CHENGALARAYA REDDY** (Chief Minister).—

(*a*) *Three* officials, *viz.*,

i. Sri Surnahalli Narasimhiah, Clerk, Municipal Office, Nyamathi, Shimoga District.

ii. Mrs. G. Muliyil, Lecturer in English, University of Mysore.

iii. Mrs. Kesari Kesavan. Lecturer in English, University of Mysore.

(*b*) *Two* officials, *viz.*,

i. Sri Surnahalli Narasimhiah (reinstated as Revenue Inspector).

ii. Mrs. Muliyil (reinstated in her original appointment)

(*c*) Yes. The representation of Sri S. Narasimhiah is under consideration.

No representation was received from Mrs. Muliyil; however the period of her absence was treated as leave, without break in service.

LEGISLATIVE BUSINESS.

The Mysore Cinematograph Entertainment Tax Bill, 1951.

Motion to consider.

The Hon'ble Sri H. C. DASAPPA (Minister for Finance and Industries).—Sir, I beg to move:

"That the Mysore Cinematograph Entertainment Tax Bill, 1951, as reported by the Select Committee, be taken into consideration."

Sir, in presenting this report, I must place before the House one fact, namely that the Bill originally contemplated a seating tax on all cinema houses other than those which move from place to place and a show or a performance tax on what are known as, Moving Talkies. The Select Committee went into the whole question in detail and felt that the structure of the taxation be modified a little, that it should not at all be made dependant on the seating capacity but to have some bearing on the number of shows also and that if it was merely on seating capacity, it might work as a hardship. I must also say that there were fairly loud protests from some of the Cinema Houses. The Select Committee was inclined to view these representations favourably and so they have evolved a formula whereby the incidence of taxation on cinemas would be reduced and also the hardship, if any, likely to ensue would be mitigated. Therefore instead of having the rates of Rs. 1-8-0, Re. 1-0-0 and Re. 0-12-0 for cinemas in the cities, in the district headquarters and in other places, they recommended that they may be as what is given in the schedule. The Select Committee felt a doubt, and that was a doubt only that this might be construed as altering the structure of the taxation and therefore suggested the desirability of securing the recommendation of His Highness the Rajpramukh. That was as a measure of abundant precaution and if my own opinion is asked, I might say that it was not a thing which was altering the structure of taxation because in the original Bill there was with reference to touring talkies a performance or show tax. We were extending that principle only to cinema houses in the cities and towns. Last there should be any questioning of the authority of this Legislature we took the precaution of securing the recommendation of His Highness the Rajpramukh in the matter and this is now going to be placed as an amendment to the original Bill and therefore I think the House would accept the Bill as amended.

One or two small matters have been considered by the Select Committee.

(THE HON'BLE SRI H. C. DASAPPA.)

The question of using prosecutions as a means to collect the arrears of tax where there has been a mere failure has been given up. It is only where there is fraudulent evasion that it would attract criminal prosecution. In other respects it does not differ very much from the original Bill and I commend it for the acceptance of this House.

Mr. SPEAKER.—Motion moved.—

"That the Mysore Cinematograph Entertainment Tax Bill, 1951, as reported by the Select Committee, be taken into consideration."

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಈ ಸಿನಿಮೊಟೋಗ್ರಾಫ್ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋದಾಗ ಆ ಸಮಿತಿಯವರು ನಿಜವಾಗಿಯೂ ಬಹಳ ಒಳ್ಳೆಯ ಕೆಲಸಮಾಡಿದ್ದಾರೆ. ಅದಕ್ಕಾಗಿ ನಾನವರನ್ನು ಅಭಿವಂದಿಸುತ್ತೇನೆ. ಏಕೆಂದರೆ, ಮೊದಲು ಇವರು ಇಟ್ಟಿದ್ದ ಬಿಲ್ಲಿನ ರೀತಿಯನ್ನು ನೋಡಿದರೆ ಎಲ್ಲರಿಗೂ ಸ್ವಲ್ಪ ತೊಂದರೆಗಿಟ್ಟುಕೊಂಡಿತೆಂದೇ ನಾನು ತಿಳಿದಿದ್ದೆ. ಈ ತೆರಿಗೆ ಸುಮಾರು 2–3 ಸಾವಿರ ರೂಪಾಯಿಗಳವರೆಗೂ ಏರಿಹೋಗುತ್ತಿತ್ತು. ಯಾವ ಸಿನಿಮಾವನ್ನು ಜಯಪ್ರದವಾಗಿ ನಡೆಸುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಇದನ್ನೆಲ್ಲಾ ಚೆನ್ನಾಗಿ ಯೋಚನೆ ಮಾಡಿ ಆದರಲ್ಲದ್ದ ತೆರಿಗೆಯ ವಿಧಾನವನ್ನೇ ಬದಲಾಯಿಸಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ ಸೀಟಿಂಗ್ ಕೆಪಾಸಿಟಿಯ ಮೇಲೆ ಹಾಕಿದ್ದರೆ, ಎಷ್ಟು 'ಸೀಟ್' ಹಾಕಿರುತ್ತದೆಯೋ ಅದರ ಮೇಲೆ ಸುಲಭವಾಗಿ ಲೆಕ್ಕ ಮಾಡುತ್ತಿದ್ದಿರಿ. ಅಂಥಾದ್ದನ್ನು ಬಿಟ್ಟು ಫೈನಾನ್ಸ್ ಮಂತ್ರಿಗಳು ಇಷ್ಟೊಂದು ಮಟ್ಟಿಗೆ ಮನೂದೆಯನ್ನು ಬದಲಾವಣೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೆಂದು ನಾನು ನಂಬಿರಲಿಲ್ಲ. ಹೀಗೆ ಮಾಡಲು ಬಹುಶಃ ಬಹಳ ಬಲವತ್ತರವಾದ ಕಾರಣಗಳೇ ಇದ್ದಿರಬೇಕು!

The Hon'ble Sri H. C. DASAPPA.—He is also a reasonable human being.

Sri H. B. GUNDAPPA GOWDA.—I hope he will continue to be reasonable till the end of this Bill.

Sri K. PUTTASWAMY.—If a reasonable approach is made he will be reasonable.

ಶ್ರೀ ಎಚ್. ಬಿ. ಗುಂಡಪ್ಪ ಗೌಡರು.—If he is reasonable, he will agree. ನನಗೇನೋ ಧೈರ್ಯವಿದೆ. Reasonable approach ನ್ನೇ ನಾನು ಮಾಡುತ್ತಿದ್ದೇನೆಂದು ನಾನು ನಂಬಿದ್ದೇನೆ. ಆದ್ದರಿಂದ ನಾನು ಹೇಳುವುದಿಷ್ಟೆ. ಸೆಲೆಕ್ಟ್ ಕಮಿಟಿಯವರು ಇಷ್ಟೊಂದು ಬದಲಾವಣೆ ಮಾಡಿದ್ದು ಮತ್ತು ಸರ್ಕಾರದವರೂ ಕೂಡ ಇಷ್ಟು ಬದಲಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದು ನೋಡಿದರೆ, ಅವರು ನಿಜವಾದ ವಸ್ತುಸ್ಥಿತಿಯನ್ನು ಮನಗಂಡಂತೆ ಕಾಣುತ್ತೆ. ಯಾವಾಗ್ಯೂ ತೆರಿಗೆ ಹಾಕುವುದರಲ್ಲಿ ಒಂದು ಮುಖ್ಯ ತತ್ವ ತಾವು ನೋಡಬೇಕು. ಮರ ನೋಡಿ ಚಕ್ಕೆ ತಗಿ ಎನ್ನುವಂತೆ ಅವರೂ (ತೆರಿಗೆದಾರರೂ) ಬೆಳೆಯುತ್ತಿರಬೇಕು, ನಮಗೂ ಸ್ವಲ್ಪ ಅನುಕೂಲವಾಗಬೇಕು. ಈ ರೀತಿಯಾಗಿ ನೀವುಗಳೂ ಒಪ್ಪಿ ಒಂದು ಒಡಂಬಡಿಕೆಗೆ (compromise) ಬಂದಿರುವುದರಿಂದ ನಾನು ಈ ರಿಪೋರ್ಟನ್ನು ಸ್ವಾಗತಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಸೆಲೆಕ್ಟ್ ಸಮಿತಿಯಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿಗೆಯೇ ಬದಲಾವಣೆಯಾಗಿ, ತೆರಿಗೆ ಹಾಕುವ ವಿಧಾನವನ್ನೂ ತಿದ್ದಿ ಈ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೂ ಕೂಡ ನಮ್ಮ ದೇಶದಲ್ಲಿ ಈಗ ಹಾಕಿರುವಷ್ಟು ಹೊರೆಯನ್ನು ಹೊರುವುದಕ್ಕೂ ಜನರಿಗೆ ಶಕ್ತಿಯಿದೆಯೇ ಎನ್ನುವುದು ಅನುಮಾನ. ಹಿಂದುಳಿದ ಯಾವ ದೇಶವೇ ಆದರೂ ಅದು ಮುಂದುವರಿಯಬೇಕಾದರೆ ಆದರ ಆರ್ಥಿಕ ಸ್ಥಿತಿ ಹೆಚ್ಚಬೇಕು. ಕೈಗಾರಿಕೆ ಕಾರ್ಖಾನೆಗಳನ್ನು ಕೊಲ್ಲುವುದಕ್ಕೆ ಪ್ರಯತ್ನಮಾಡಬಾರದು. ನ್ಯಾಯವಾಗಿ ಅವಶ್ಯಕವಾದ ಎಲ್ಲಾ ಬ್ಯಾಂಕಿನ ಸೌಕರ್ಯಗಳನ್ನೂ ದ್ರವ್ಯನಹಾಯ, ತೆರಿಗೆ ರಿಯಾಯಿತಿಗಳನ್ನು ತೋರಿಸಿ ಅವುಗಳನ್ನು ಬೆಳೆಸಿದರೇನೇ ದೇಶಕ್ಕೆ ಒಳ್ಳೆಯದಾದೀತು. ಅಲ್ಲದೆ, ನಮ್ಮ ದೇಶದಲ್ಲಿ ಇಂಥಾ ಸಿನಿಮಾ ಫಿಲಂಗಳ ವಿಷಯದಲ್ಲಿ ತೆರಿಗೆ ಹಾಕಬೇಕಾದರೆ ಸ್ವಲ್ಪ ಯೋಚನೆ ಮಾಡಿ ಮಾಡಬೇಕು. ನಮ್ಮಲ್ಲೀಗ educative films, information films ಮತ್ತಿತರ ಉಪಯುಕ್ತವಾದ ಪ್ರಚಾರ ಕಾರ್ಯ ಇವೆಲ್ಲವೂ ಕೂಡ ಈ ಸಿನಿಮಾಗಳ ಮುಖಾಂತರವೇ ನಡೆಯಬೇಕಾಗಿದೆ. ಬೇರೆ ಇವಕ್ಕಾಗಿ ಏನನ್ನೂ ಮಾಡಿಲ್ಲ. ಅಂಥಾದ್ದರಲ್ಲಿ ಜನಗಳಿಗೆ ಸ್ವಲ್ಪಮಟ್ಟಿಗೆ ಮನೋರಂಜನೆಯನ್ನುಂಟುಮಾಡುವ ಇಂಥವುಗಳಿಗೆ ಹೀಗೆ ಮಾಡಕೂಡದು. ಈಗಾಗಲೇ entertainment tax ಹಾಕಿದ್ದೀರಿ, ಅದೇ ಕಷ್ಟವಾಗಿದೆ. ಅಂಥಾದ್ದರಲ್ಲಿ ಇನ್ನೊಂದು ತೆರಿಗೆಯನ್ನು ಹಾಕಿರುವುದು ಬಹಳ ಅನ್ಯಾಯ. ನಾನು ಕಂಡಂತೆ ಇತರ ನೆರೆಹೊರೆಯ ಯಾವ ಪ್ರಾಂತ್ಯದಲ್ಲೂ ಇಂಥ ತೆರಿಗೆಯಿರುವಂತೆ ಕಾಣಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು —ನೀವು ಕಾಣದಿರುವ ಹಾಗೆ ಮದ್ರಾಸಿನಲ್ಲಿದೆ.

ಶ್ರೀ ಬಿ. ಹುಚ್ಚೇಗೌಡರು.—ನನಗೆ ತಿಳಿದಿರುವ ಮಟ್ಟಿಗೆ ಗೊತ್ತಿಲ್ಲ. ಒಟ್ಟಿನಲ್ಲಿ ಸರ್ಕಾರದವರು ಹೀಗೆಲ್ಲಾ ಹಾಕಿರುವ ಕಂದಾಯವನ್ನೆಲ್ಲಾ ಸೇರಿಸಿ ಲೆಕ್ಕಹಾಕಿ ನೋಡಿದರೆ, ನಾವುನಮ್ಮ ಊರಿಗೆ ವಾಪಸು ಹೋಗಿ ಜನರಿಗೆ ಜವಾಬು ಹೇಳುವುದೇ ಕಷ್ಟವಾಗುತ್ತದೆ. ಇವೆಲ್ಲಾ ಸೇರಿದರೆ ಸುಮಾರು 2 ಕೋಟಿ ರೂಪಾಯಿಗಳಷ್ಟು ತೆರಿಗೆಗೆ ನಾವು ಒಪ್ಪಿಗೆ ಕೊಟ್ಟಹಾಗಾಗುತ್ತದೆ. ಈ ರೀತಿಯಾಗಿ ನೀವು ಹೆಚ್ಚು ಹೆಚ್ಚು ತೆರಿಗೆ ಹಾಕುವುದಕ್ಕೆ ಬದಲು ನೀವು ಕೇಂದ್ರದಿಂದ ಹೆಚ್ಚಿಗೆ ಹಣವನ್ನು ತೆಗೆದುಕೊಂಡು ಹೀಗೆ ತೆರಿಗೆ ಹಾಕುವುದನ್ನು ತಪ್ಪಿಸಬೇಕು. ಉದಾಹರಣೆಗೆ ತಿರುವಾಂಕೂರಿನ ವರನ್ನು ನೋಡಿ, ಎಷ್ಟು bold step ತೆಗೆದುಕೊಂಡು ತಮ್ಮ ಹೇಳಿಕೆ ಕೊಟ್ಟಿದ್ದಾರೆ. ಮೊನ್ನೆ ತಾನೆ ಅಲ್ಲಿನ ನಾಯಕರಾದ ಜರ್ಜಬುಲ್‌ರವರು 14 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ಸಭೆಯ ಮುಂದಿಡುತ್ತಾ ಆರ್ಥಿಕ ವಿಲೀನೀಕರಣದಿಂದ ಎಷ್ಟೊಂದು ಅನ್ಯಾಯವಾಗಿದೆ, ಈಗಿನ ಆರ್ಥಿಕ ಹೀನಸ್ಥಿತಿಗೆ, ಅವರ ಹಣಕಾಸಿನ ಸ್ಥಿತಿ ಹೀಗೆ ಅಸ್ತವ್ಯಸ್ತವಾಗಿರುವುದಕ್ಕೆ ಕೇಂದ್ರ ಸರ್ಕಾರದವರೇ ಕಾರಣವೆಂದು ಶಾಸನ ಸಭೆಯ ಮುಂದೆ ಹೇಳಿಕೆ ಕೊಟ್ಟಿದ್ದಾರೆ. ಅದೇ ನಮ್ಮ ಸರ್ಕಾರದವರಾದರೋ ನಮ್ಮ ದೇಶದ ಆರ್ಥಿಕ ಸ್ಥಿತಿ ಬಹಳ ಭದ್ರವಾಗಿದೆ, ಬೇರೆ ಯಾರ ಸಹಾಯವೂ ಬೇಕಿಲ್ಲವೆಂದು ಒಂದು ಅಭಿಪ್ರಾಯ ಕೊಟ್ಟು ದಿನೇ ದಿನೇ ನಮ್ಮ ಸ್ಥಿತಿ

ಹೀಗೆ ಚಿಂತಾಜನಕವಾಗಿರುವುದಕ್ಕೆ ಕಾರಣವಾಗಿದೆ. ವಾನ್ತವಾಂಶಗಳನ್ನು ಅವರು ಮುಂದಿಡುವುದಕ್ಕೇಕೆ ಹಿಂಜರಿಯುತ್ತಾರೋ ಗೊತ್ತಿಲ್ಲ. ಭದ್ರಾವತಿ ಕಬ್ಬಿಣದ ಕಾರ್ಖಾನೆ ವರ್ಷಕ್ಕೆ 14ಲಕ್ಷ ರೂಪಾಯಿಗಳಂತೆ 30 ವರ್ಷಗಳ ಕಾಲ ಕೊಟ್ಟು ಇಂದು ನಾವು ತಯಾರು ಮಾಡುವ 20,000 ಟನ್ನನ್ನೂ ಇಂಡಿಯಾ ಸರ್ಕಾರ ದವರೇ ತೆಗೆದುಕೊಳ್ಳುವಾಗ, ನಮಗೆ ಸರಿಯಾಗಿ ಶೇಕಡ ವಾರು ಬಡ್ಡಿ ಬರುವಂತೆಯೂ ದರ ಕೊಡದೆ ಹೋದರೇ ಹೇಗೆ! ಬಹಳ ಕಷ್ಟಪಟ್ಟು ಕೈಗಾರಿಕೆಗಳನ್ನು ಹೀಗೆ ಅಭಿವೃದ್ಧಿಗೆ ತಂದು ಒಳ್ಳೆ ಸ್ಥಿತಿಗೆ ಬಂದು ಫಲ ಕೊಡುವ ಕಾಲದಲ್ಲಿ ಬೇರೆಯವರು ಹೊಡೆದುಕೊಂಡು ಹೋದರೆ ನಾವು ಅಭಿವೃದ್ಧಿಗೆ ಬರುವುದೆಲ್ಲಿ? ಇವೆಲ್ಲಾ ಹೀಗೆ ಮಾಡಿ ಈಗ ಮಾತೆತ್ತಿದರೆ ತೆರಿಗೆ ಹಾಕುತ್ತಿದ್ದರೆ ಜನ ರಿಂದ ಎಷ್ಟು ಅಪವಾದ ಬರುತ್ತದೆ! ನಿನ್ನೆ ತಾವು ಕಂಡ ಹಾಗೆ ಆಹಾರ ಧಾನ್ಯಗಳ ಬೆಲೆಯನ್ನು ಎಷ್ಟು ಜಾಸ್ತಿ ಮಾಡಿದಿರಿ! ಆಹಾರ ಮಂತ್ರಿಗಳನ್ನು ಕೇಳಿದ್ದಕ್ಕೆ ಸಭೆ ಯವರ ಒಪ್ಪಿಗೆ ಪಡೆದೇ ಜಾಸ್ತಿ ಮಾಡಿದೆವೆಂದು ಹೇಳಿ ದರು. ಇದರಿಂದ $1\frac{1}{2}$ ಕೋಟಿ ರೂಪಾಯಿ ಜನರಿಂದ ಹೊರಟು ಹೋಯಿತು. ನಾವು ಒಪ್ಪಿದ್ದಾದರೂ ಏಕೆ? ಸರ್ಕಾರದ ಸ್ಥಿತಿ ಹೀಗಿದೆಯಲ್ಲಾ ಎಂದು ನೋಡಿ ಕೊಟ್ಟೆವು. ಇದೇ ಪ್ರಕಾರ ಎಲ್ಲಕ್ಕೂ ಜಾಸ್ತಿ ಮಾಡುತ್ತಾ ಒಪ್ಪಿದ್ದೀರಿ, ಎಂದು ನಮ್ಮ ಮೇಲೆ ಹೇರಿ ದರೆ ಹೇಗೆ?

ಒಬ್ಬ ಸದಸ್ಯರು —ಒಪ್ಪಿದ್ದಕ್ಕೂ ಒಪ್ಪಿದ್ದೀರಿ ಎಂದು ಹೇಳಬೇಡವೇ!

ಶ್ರೀ ಬಿ. ಹುಚ್ಚೇಗೌಡರು.—ಆದ್ದರಿಂದ ಇಂಥ ತೆರಿಗೆಗಳನ್ನು ಹೊಸ ಹೊಸ ದಾಗಿ ಹಾಕುವುದನ್ನು ಪ್ರತಿ ವರ್ಷವೂ ಮಾಮೂಲು ಮಾಡಿಕೊಂಡಿರುವುದನ್ನು ತಪ್ಪಿಸಿ ಆದಷ್ಟು ಜಾಗ್ರತೆ ಇರುವ ತೆರಿಗೆಗಳನ್ನೇ ಕಡಿ ಮೆ ಮಾಡುವುದಕ್ಕೆ ಪ್ರಯತ್ನಪಟ್ಟು, ಫೈನಾನ್ಷಿಯಲ್ ಇಂಟಿಗ್ರೇಷನ್‌ನಿಂದ ಉಂಟಾಗಿರುವ ತೊಂದರೆ, ಕೈಗಾರಿಕೆಗಳಲ್ಲಿ common pool ಎಂದು ಕಬ್ಬಿಣ ವಗೈರೆ ಗಳನ್ನು ಕೊಟ್ಟು ಸರಿಯಾದ ಬಡ್ಡಿ ತೆಗೆದುಕೊಳ್ಳದಿರು ವುದು—ಇವುಗಳನ್ನ ಸರಿಪಡಿಸಿಕೊಂಡರೆ ನಮಗೆ ತೊಂ ದರೆಯೇ ಇರುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಇದು ಹೀಗೆ ನೋಡತಕ್ಕವರ ಮೇಲೆ ಬೀಳುತ್ತದೆ. ಹಾಗೆ ಹಗಲೆಲ್ಲಾ ಕಷ್ಟಪಟ್ಟು, ಸರ್ಕಾರಕ್ಕೆ ನಾನಾ ರೂಪದಲ್ಲಿ ತೆರಿಗೆ ಕೊಡುತ್ತಿದ್ದಾಗ್ಗೂ ಬೇಜಾರಾ ಗಿದ್ದಾಗ ಹೋಗಿ ನೋಡತಕ್ಕ ಈ ಸಿನಿಮಾಗಳಿಗೆ ತಾವು ಈ ಸೆಸ್ಸು ಹಾಕಿರತಕ್ಕದ್ದು ಸರಿಯಾಗಿಲ್ಲ. ಇದೆಲ್ಲಾ ನೋಡಲು ಹೋಗತಕ್ಕ ಜನರ ಮೇಲೆ ಮಾತ್ರ ಬೀಳತಕ್ಕದ್ದಾಗಿರುವುದರಿಂದ ಇದು ಇರಲೇ ಕೂಡದೆಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ ತಾವು ದಯವಿಟ್ಟು ಇದನ್ನು ವಾಪಸ್ಸು ತೆಗದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸೆಲೆಕ್ಟ್ ಸಮಿತಿಯವರು ಕ್ಲಾಜ್ 4ರಲ್ಲಿ we are of opinion that the penalty for non-payment should be limited to cases of fraudulent evasion ಎಂದು ತಿಳಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೀಗೆ ಆ 'evasion' ನಡೆಯುವುದಕ್ಕೆ ಅವಕಾಶವೇ ಇಲ್ಲದ ಹಾಗೆ ಮಾಡತಕ್ಕದ್ದು ಬಹಳ ಉತ್ತ ಮವಾಗಿದೆಯೆಂದು ತೋರುತ್ತದೆ. ಹೇಗೆಂದರೆ ಯಾವ ಯಾವ ದಿವಸ ಅವರು ಪ್ರದರ್ಶನ ನಡೆಸುತ್ತಾರೋ ಆಯಾಯ ದಿವಸವೇ ಅವರು ಪಾವತಿಮಾಡತಕ್ಕ ಈ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡುವಂತೆ ಮಾಡಿದರೆ ಈ evasion ಪ್ರಶ್ನೆಯೇ ಏಳುವುದಿಲ್ಲ; ತಕ್ಕೀರಾಗುವ ಸಂಭವವೂ ಇರುವುದಿಲ್ಲ. ಹಾಗೆ ಮಾಡದೆ ತಿಂಗ ಳಾನುಗಟ್ಟಲೆ ಆ ಹಣವನ್ನು ಆತನಲ್ಲೇ ಬಿಟ್ಟುಬಿಟ್ಟು, ಆತನಿಗೆ ಹೆಚ್ಚು ಹೆಚ್ಚು ಅವಕಾಶ ಕೊಟ್ಟ ಹಾಗೆಲ್ಲಾ, ಆ ತೆರಿಗೆ ಕೊಡತಕ್ಕವನ ಮೇಲೆ ಭಾರ ಹೆಚ್ಚು ಹೆಚ್ಚಾಗಿ ಬೀಳುತ್ತದೆ. ಹಾಗೆ ಯಾವಾಗ ಭಾರ ಜಾಸ್ತಿಯಾಗು ತ್ತದೋ ಆಗ ಆ ತೆರಿಗೆ ಕೊಡಲು ಆತನಿಗೆ ಕಷ್ಟವಾಗಿಯೇ ಆಗುತ್ತದೆ. ಯಾರು ಪ್ರದರ್ಶನ ನಡೆಸುತ್ತಾರೋ, ಒಂದಾಗಲೀ, ಅಥವಾ ಎರಡು ಪ್ರದರ್ಶನಗಳಾಗಲೀ, ಆ ಪ್ರದರ್ಶನಗಳಿಗಾಗುವ ಸ್ವಾಮ್ಯಂಪುಗಳನ್ನು ತೆಗೆದು ಕೊಂಡು, ಆ ಬಗ್ಯೆ ವಸೂಲಾಗುವ ತೆರಿಗೆಯ ಭಾಗದ ಹಣವನ್ನು ಆಯಾಯ ದಿವಸವೇ ಖಜಾನೆಗೆ ಪಾವತಿ ಮಾಡುವಂತೆಯೂ, ಹಾಗೆ ಒಂದು ದಿವಸದ ಪ್ರದರ್ಶನ ಗಳ ಸೆಸ್ಸನ್ನು ಪಾವತಿ ಮಾಡದೆ ತಪ್ಪಿದರೆ, ಮುಂದಿನ ದಿವಸದ ಪ್ರದರ್ಶನಕ್ಕೆ ಅವಕಾಶ ಕೊಡದಂತೆ ಪ್ರತಿಬಂಧಕ ಹಾಕುವುದರ ಮೂಲಕ ರೂಲ್ ಮೇಕಿಂಗ್‌ನಲ್ಲಿ ಒಂದು ಕಂಡೀಷನ್ ಹಾಕಿದರೆ, ಅವರಿಗೂ ಭಾರವಿರುವುದಿಲ್ಲ, evasion ಮಾಡುವುದಕ್ಕೂ ಅವಕಾಶವಾಗುವುದಿಲ್ಲ, ಹೀಗೊಂದು ಕಂಡೀಷನ್ ಹಾಕದೆ ಹೋದರೆ, ದಿವಸಕ್ಕೆ ಎರಡು ಪ್ರದರ್ಶನಗಳಂತೆ ಮಾಡುವ ಕಡೆ ಪ್ರತಿಯೊಂದು ಪ್ರದರ್ಶನಕ್ಕೆ 5 ರೂಪಾಯಿಗಳ ತೆರಿಗೆಯನ್ನು ಕೊಡ ಬೇಕೆಂದರೆ ದಿವಸಕ್ಕೆ ಹತ್ತುರೂಪಾಯಿಗಳಾಗುತ್ತ. ಈ ಹತ್ತು ರೂಪಾಯಿಗಳನ್ನು ಆಯಾಯ ದಿವಸವೇ ವಸೂಲು ಮಾಡಿಕೊಳ್ಳದೆ ತಿಂಗಳಿಗೊಂದಾವರ್ತಿ ವಸೂಲು ಮಾಡಬೇಕಾದರೆ $30 \times 10 = 300$ ರೂಪಾ ಯಿಗಳನ್ನು ಒಂದೇ ಗಂಟಿನಲ್ಲಿ ತೆರಲು ಆತನಿಗೆ ಕಷ್ಟ ವಾಗಿಯೇ ಆಗುತ್ತೆ. ಆದ್ದರಿಂದ ಹೀಗೆ ಒಂದು ಪ್ರತಿಬಂ ಧಕ ಹಾಕಿದರೆ ಉತ್ತಮವೆಂದು ಕಾಣುತ್ತೆ.

ಮನುಷ್ಯನಿಗೆ ಆಹಾರ, ವ್ಯವಹಾರಗಳು ಎಷ್ಟು ಸಂತೋಷವೋ ಈ ಸಿನಿಮಾಗಳನ್ನು ನೋಡುವುದೂ ಅಷ್ಟೇ ಸಂತೋಷ. ಆದುದರಿಂದ ಇದರ ಮೇಲೆ ತೆರಿಗೆ ಹಾಕತಕ್ಕದ್ದರ ಸೂಕ್ತಾ ಸೂಕ್ತತೆಗಳನ್ನು ತಾವೇ ಪರ್ಯಾಲೋಚಿಸಬೇಕಾಗಿದೆ. ಆದರೆ ನಾನು ತಿಳಿಸ ತಕ್ಕದ್ದು ಪ್ರಾರಂಭದಲ್ಲೇ ಇಷ್ಟು ತೆರಿಗೆ ವಿಧಿಸುವುದು ಬಹಳ ಜಾಸ್ತಿಯೆಂದು ಜನರು ಭಾವಿಸಬಹುದು ಈ ಅಂಶವನ್ನು ತಾವು ಪರ್ಯಾಲೋಚಿಸಿ ನೋಡಬೇಕಾ ಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು,—ಕಮ್ಮಿ ಎಂಬುದಾಗಿ ಕಂಡು ಬಂದರೆ ಆಗೇನು ಮಾಡಬೇಕು?

ಶ್ರೀ ಎ. ಭೀಮಪ್ಪನಾಯಕರು.—ಹಾಗೆ ಇದು ಕಮ್ಮಿ ಎಂದು ಕಂಡು ಬಂದರೆ ಹೆಚ್ಚು ಮಾಡಬಹುದು. ಆದರೆ ತಾವು ಹೆಚ್ಚು ಹೆಚ್ಚು ತೆರಿಗೆ ವಿಧಿಸುವಂತೆಲ್ಲಾ, ಅದು ಜನರ ಮೇಲೆ ಎಂದರೆ ನೋಡತಕ್ಕವರ ಮೇಲೆ ಬೀಳುತ್ತದೆಯೇ ಹೊರತು ಈ ಪ್ರದರ್ಶನಕಾರರ ಮೇಲೇನೂ ಬೀಳುವುದಿಲ್ಲ. ಆದರೆ ತಾವು ವಿಧಿಸತಕ್ಕ ತೆರಿಗೆ ಏನಿದ್ದರೂ ಡಿಸ್ಟ್ರಿಬ್ಯೂಟರ್ಸ್ ಮತ್ತು ಎಗ್ಜಿಬಿಟರ್ಸ್ ಮೇಲೆ ಬೀಳುವ ರೀತಿ ಮಾಡಬೇಕು. ಹೀಗೆ ಮಾಡಬೇಕಾದರೆ ಆ ಎರಡು ಜನಗಳೂ ಹಂಚಿಕೊಳ್ಳುವ ನಫೆಯನ್ನು ಈ ಟ್ಯಾಕ್ಸ್‌ನಲ್ಲಿ ವಜಾಮಾಡಿ ನಂತರ ಹಂಚಿಕೊಳ್ಳುವ ರೀತಿ ಏರ್ಪಡುವುದಾದರೆ ಆಗ ಅನು ಕೂಲವಾಗುತ್ತೆಂದು ಹೇಳಬಹುದು. ಮುಂದೆಯೇನೋ ಈ ಡಿಸ್ಟ್ರಿಬ್ಯೂಟರ್ಸ್ ಮೇಲೆ ಬೇರೆ ವಿಧದಲ್ಲಿ ಸರ್ಕಾರ ದವರು ಒಂದು ತೆರಿಗೆ ವಿಧಿಸಬೇಕೆಂಬ ಆಲೋಚನೆ ಇಟ್ಟುಕೊಂಡಿದ್ದಾರೆಂಬುದಾಗಿ ನಾನು ಕೇಳುತ್ತೇನೆ.

The Hon'ble Sri H. C. DASAPPA.— No.

ಶ್ರೀ ಎ. ಭೀಮಪ್ಪನಾಯಕರು.—ನಿಧಾನವಾಗಿ ಮಾಡಲಾಗುತ್ತದೆಂದು ಹೇಳುವುದು, ಅದೂ ಬಹಳ ಸಂತೋಷದ ವಿಚಾರವೆ. ಅಂತೂ ಸರ್ಕಾರದವರು ಇದನ್ನು ಒಂದು ಸರಿಯಾದ ವ್ಯವಸ್ಥೆಮಾಡಿ ಏರ್ಪಾಡು ಮಾಡುವುದು ಬಹಳ ಮುಖ್ಯವಾದ್ದು. ಹಾಗೆ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಈ ರೂಲ್ ಮೇಕಿಂಗ್‌ನಲ್ಲಿ ಡಿಸ್ಟ್ರಿಬ್ಯೂಟರ್ಸ್ ಮತ್ತು ಎಗ್ಸಿಬಿಟರ್ಸ್ ಈ ಇಬ್ಬರೂ ಕೂಡ ಈ ತೆರಿಗೆಗೆ ಜವಾಬ್ದಾರರೆಂಬುದಾಗಿ, ಮಾಡತಕ್ಕದ್ದರಲ್ಲಿ ಯಾವ ಅಭ್ಯಂತರವೂ ಕಾಣುವುದಿಲ್ಲ. ಈಗ ಯಾರೋ ಒಬ್ಬ ಮನುಷ್ಯ ಬಾಡಿಗೆಗಾಗಿ ಒಂದು ಥಿಯೇಟರ್ ಕಟ್ಟಿಸಿರುತ್ತಾನೆ; ಆ ಥಿಯೇಟರಿನಲ್ಲಿ ಯಾರೋ ಬೇರೆ ಡಿಸ್ಟ್ರಿಬ್ಯೂಟರ್‌ರವರು ಪ್ರದರ್ಶನ ನಡೆಸುತ್ತಾರೆ, ನಂತರ ಆ ದಿವಸದ ಉತ್ಪತ್ತಿಯನ್ನು ಆತ ತೆಗೆದುಕೊಂಡು, ಬಾಡಿಗೆದಾರನಿಗೆ ಥಿಯೇಟರ್ ಬಾಡಿಗೆ ಕೊಡುತ್ತಾರೆ, ನಂತರ ಅವರು ಎಗ್ಸಿಬಿಟರ್ ಒಬ್ಬನ ಮೇಲೆ ಆ ದಿವಸದ ಪ್ರದರ್ಶನದ ತೆರಿಗೆ ಬರಲಿಲ್ಲವೆಂದು ಕ್ರಮ ಜರುಗಿಸಿದರೆ, ಆತ ಏನು ಮಾಡಬೇಕು? ಇಂಥಾ ಸಂದರ್ಭಗಳಲ್ಲಿ ಡಿಸ್ಟ್ರಿಬ್ಯೂಟರ್ ಈ ತೆರಿಗೆಯನ್ನು ತಪ್ಪಿಸಿಕೊಳ್ಳಲು ಒಂದು ಅವಕಾಶವಾಗಬಹುದು. ಆದಕಾರಣ ತಮ್ಮ ರೂಲ್ ಮೇಕಿಂಗ್‌ನಲ್ಲಿ ಈ ಎರಡೂ ಬಗೆಯ ಜನರನ್ನು ಈ ತೆರಿಗೆಗೆ ಒಳಪಡಿಸುವುದರಲ್ಲಿ ಯಾವ ತೊಂದರೆಯೂ ಕಾಣುವುದಿಲ್ಲ. ಹಾಗೆ ತಪ್ಪಿಸಿಕೊಳ್ಳಲು ಅವಕಾಶವಿರುವುದಿಲ್ಲ. ಹಾಗೇನಾದರೂ ಎಗ್ಸಿಬಿಟರ್ಸ್ ಈ ತೆರಿಗೆ ಜಾಸ್ತಿಯಾಯಿತೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರೆ ಮುಂದೆ ತಾವು ಅದನ್ನು ಪರ್ಯಾಲೋಚಿಸಿ, ಟಿಕೆಟ್ ಮೇಲೆ ಸಹ ಸ್ವಲ್ಪ ಬೀಳುವಂತೆ ಮುಂದಕ್ಕೆ ಆಲೋಚನೆ ಮಾಡಬಹುದು. ಅಂತೂ ಈಗ ಈ ತೆರಿಗೆಯನ್ನು ಎಗ್ಸಿಬಿಟರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಮೇಲೆ ಹಾಕತಕ್ಕದ್ದರಲ್ಲಿ ಯಾವ ಅಭ್ಯಂತರವೂ ಇದ್ದಂತೆ ಕಾಣುತ್ತಿಲ್ಲ.

Sri H. B. GUNDAPPA GOWDA.—I would like to know from the Hon'ble Finance Minister whether the distributor is made to pay any portion of the tax.

The Hon'ble Sri H. C. DASAPPA.— It looks as though that this tax which is called either a show tax or performance tax, will form part of the expenses of the Exhibitor with the result that what is shared between the Distributor and the Exhibitor will to that extent get reduced so that both of them become equal sharers in the liability of the payment of the tax. The Distributor gets a share of the proceeds, a share of the realisation, and the realisation will be calculated after meeting the expenses.

Sri H. B. GUNDAPPA GOWDA.— The point is whether the Distributor will be agreeable to classify this tax as to form part of the expense is a moot question. The Distributor may not be agreeable, I know, as a matter of fact, for ground rate and other things, the Distributor will not take any responsibility at all. The income is divided between the Exhibitor and the Distributor, but not about the tax. Unless it is made sure that it is shared by the Distributor also there would difficulty. That point might be clarified.

The Hon'ble Sri K. T. BHASHYAM.— That will depend on the Exhibitor.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಹಣಕಾಸಿನ ಸಚಿವರು ಬಜೆಟ್ಟಿನಲ್ಲಿ ಜೋತಾ ಆಗಿರತಕ್ಕ ಮೊಬಲಗನ್ನು ಸರಿತೂಗಿಸುವುದಕ್ಕಾಗಿ ಈ ಒಂದು ಹೊಸ ತೆರಿಗೆಯನ್ನು ಹಾಕಲು ಈಗ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದೇವೆಂದು ತಿಳಿಸಿದ್ದಕ್ಕಾಗಿ ಅವರಿಗೆ ನಾನು ಬಹಳವಾಗಿ ನನ್ನ ಅಭಿನಂದನೆಗಳನ್ನ ಸಲ್ಲಿಸುತ್ತೇನೆ. ಈಗ ಹಣ ಸಂಪಾದನೆ ಮಾಡತಕ್ಕ ಜನರಿಗೆ ಮೂರು ಬಾಬುಗಳು ಕಾಮಧೇನು ವಿನಂತೆ ಇರುತ್ತವೆ. ಹಾಗೆ ಕಾಮಧೇನುವಿನೋಪಾದಿಯಲ್ಲಿರತಕ್ಕ ಆ ಮೂರು ಬಾಬುಗಳ್ಯಾವುವೆಂದರೆ—ಹೋಟಲುಗಳು, ಸಿನಿಮಾಗಳು ಮತ್ತು ಬಸ್ಸಿನ ಸರ್ವೀಸುಗಳು. ಇಂಥಾ ಕಾಮಧೇನುಗಳಿಂದ ಅಧಿಕ ಲಾಭ ಪಡೆಯತಕ್ಕವರ ಮೇಲೆ ಕೊಂಚ ತೆರಿಗೆ ಹಾಕತಕ್ಕದ್ದು ಉಚಿತವಾದುದೆಂದು ಹೇಳಿ, ಸಾರ್ವಜನಿಕ ಉಪಯುಕ್ತ ತೆಗಾಗಿ, ಈ ತೆರಿಗೆಯನ್ನ ಈಗ ಅವರ ಮೇಲೆ ವಿಧಿಸ ಬೇಕೆಂದು ಈ ಕಾನೂನು ತಂದಿರತಕ್ಕದ್ದು ಬಹಳ ಶ್ಲಾಘನೀಯವಾದದ್ದು.

ನನಗೆ ತಿಳಿದಿರುವ ಹಾಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಎಕ್ಸಿಬಿಟರ್ಸ್ ಅಂದರೆ ಪ್ರದರ್ಶನಕಾರರ ಮೇಲೆ ಬೀಳುತ್ತದೆಯೇ ಹೊರತು ಹಂಚುವವರ ಮೇಲೆ ಅಂದರೆ ಡಿಸ್ಟ್ರಿಬ್ಯೂಟರ್ಸ್ ಮೇಲೆ ಬೀಳುವುದಿಲ್ಲ. ಪ್ರದರ್ಶನಕಾರರಿಗೆ ಪ್ರಚಾರ ಮಾಡುವುದು, ಪೋಲೀಸ್ ಸಿಬ್ಬಂದಿ, ವಿದ್ಯುಚ್ಛಕ್ತಿ ಛಾರ್ಜು, ಬಾಡಿಗೆ ವಗೈರೆಗೆ ನಾನಾ ರೀತಿಯಲ್ಲಿ ಖರ್ಚಿದೆ. ಆದರೆ ಸುಲಭವಾಗಿ ಸಂಪಾದನೆ ಮಾಡುವವರು ಹಂಚುವವರು. ಅವರ ಕೆಲಸ ಬಹು ಸುಲಭ. ಅದು ಒಳ್ಳೆಯ ಲಾಭದಾಯಕ ಗುತ್ತಿಗೆ ಹಾಗೆ. ಫಿಲ್ಮ್‌ಗಳನ್ನು ಯಾರೋ ಎಲ್ಲೋ ತಯಾರುಮಾಡುತ್ತಾರೆ. ತಯಾರು ಮಾಡುವವರ ಬಳಿ ಹೋಗಿ ಜನರ ಮನಸ್ಸನ್ನು ಯಾವುದು ಆಕರ್ಷಿಸುತ್ತದೋ ಅಂತಹದನ್ನು ಹಂಚಿಕೆದಾರರು ಚುನಾಯಿಸಿ ಗುತ್ತಿಗೆ ನಿಷ್ಕರ್ಷೆಮಾಡಿ ತೆಗೆದುಕೊಂಡು ಬರುತ್ತಾರೆ. ಪ್ರದರ್ಶನಕಾರರಿಗೆ ಏದು ಗೊತ್ತಾಗುವುದಿಲ್ಲ. ಹಾಗೆ ತಂದದ್ದನ್ನು ಹಂಚಿ ಬೇಕಾದಷ್ಟು ಸಂಪಾದನೆ ಮಾಡುತ್ತಾರೆ. ಅವರು ಉತ್ಪತ್ತಿಯಲ್ಲಿ ಸೇಕಡ 50ಕ್ಕಿಂತ ಕಡಿಮೆ ತೆಗೆದುಕೊಳ್ಳುವುದಿಲ್ಲ. ಕೆಲವು ಚಿತ್ರಗಳಲ್ಲಿ ಸೇಕಡ 65ರವರೆಗೂ ಸೆಳೆಯುತ್ತಾರೆ. ಅದೇ ಪ್ರದರ್ಶನಕಾರನು ತಾನು ವಿನಿಯೋಗಿಸಿರುವ ಹಣದ ಬಡ್ಡಿ, ಬಾಡಿಗೆ ವಗೈರೆ ಎಲ್ಲಾ ಪಡಿಸಬೇಕು. ಆದ್ದರಿಂದ ಹಂಚಿಕೆದಾರರೂ ಕೂಡ ಜನರ ಹಣವನ್ನು ವಿಪರೀತವಾಗಿ ಸೆಳೆಯುವುದರಿಂದ ಅವರೂ ದೇಶದ ಅಭಿವೃದ್ಧಿಗಾಗಿ ಒಂದು ತೆರಿಗೆಯನ್ನು ಕೊಡುವ ಹಾಗೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯ.

ಎರಡನೆಯದಾಗಿ, ಪ್ರತಿಯೊಂದು ಪ್ರದರ್ಶನಕ್ಕೂ ಈ ತೆರಿಗೆ ಹಾಕಿರುವುದರಿಂದ ಪ್ರದರ್ಶನಕಾರರ ಟಿಕೆಟ್ ಬೆಲೆ ಹೆಚ್ಚಿಸುವುದಕ್ಕೆ ಕೂಡ ಅವಕಾಶವಿಲ್ಲ. ಮೊದಲಿದ್ದ ರೀತಿಯಲ್ಲಿ ಸೀಟಿಗೆ ಒಂದೂವರೆ ರೂಪಾಯಿ ಇದ್ದರೆ 800 ಸೀಟಿಗೆ ಒಂದುಸಾವಿರ ಇನ್ನೂರು ರೂಪಾಯಿಗಳನ್ನು ಒಬ್ಬ ತೆರಬೇಕಾಗುತ್ತಿತ್ತು. ಸೆಲೆಕ್ಟ್ ಸಮಿತಿಯಲ್ಲಿ ಇದನ್ನು ಪರಿಶೀಲಿಸಿ ಸರಿಪಡಿಸಿದ್ದಾರೆ. ಒಂದು ಟಿಕೆಟ್ಟಿಗೆ ಅರ್ಧಾಣೆಯಂತೆ ಮೂರು ಪ್ರದರ್ಶನ ಮಾಡಿದರೆ 1½ ಆಣೆ, ಎರಡು ಪ್ರದರ್ಶನ ನಡೆದರೆ ಒಂದಾಣೆ ಮಾತ್ರ ಲಾಭ ಬರುವುದು. ಇದನ್ನು ಸೆಲೆಕ್ಟ್ ಸಮಿತಿಯ ಮಾನ್ಯ ಸದಸ್ಯರೂ ಮತ್ತು ಅಲ್ಲಿ ಅಧ್ಯಕ್ಷರಾಗಿದ್ದ ಮಾನ್ಯ ಸಚಿವರೂ ಚಾಣಾಕ್ಷತೆಯಿಂದ ಪರಿಶೀಲಿಸಿ ಪ್ರದರ್ಶನದ ಮೇಲೆ ಹಾಕಿರುವುದು ಬಹಳ ಶ್ಲಾಘನೀಯವಾದದ್ದು. ಆದರೂ ನನ್ನ ದೃಷ್ಟಿಯಲ್ಲಿ ಇದು ಬಹಳ ನುಭವಾದದ್ದೇ ಆಗಿದೆ. ಮನರಂಜನೆಗಾಗಿ ಕಷ್ಟಪಟ್ಟವರು ಬರುತ್ತಾರೆ. ಅವರು ಚಿತ್ರವನ್ನು ನೋಡಿ ಸಂತೋಷದಿಂದ ಹೋಗುವುದನ್ನು ತಪ್ಪಿಸುತ್ತಾರೆ ಎಂದು ಕೆಲವರು ಹೇಳಿದರು. ಆದರೆ ನನ್ನ ದೃಷ್ಟಿಯಲ್ಲಿ ತೆರಿಗೆ ಇನ್ನೂ ಹೆಚ್ಚುಮಾಡಬೇಕಾಗಿತ್ತು. ಹೊಟ್ಟೆಗೆ ಹಿಟ್ಟಿಲ್ಲ, ಬಟ್ಟೆಗೆ ಮಲ್ಲಿಗೆಹೂ ಎಂದು ಹೇಳುವ ಹಾಗೆ ಬಡವರು ಚಿತ್ರಗಳಿಗೆ ಹೆಚ್ಚು ಹಣ ಹಾಕುವುದು ಸರಿಯಲ್ಲ. ಹೆಚ್ಚಾಗಿ ಬಡವರು ಮತ್ತು ಮಧ್ಯಮ ತರಗತಿಯವರು ಚಿತ್ರಗಳನ್ನು ನೋಡುವುದು ಹೆಚ್ಚು. ಅನುಕೂಲಸ್ಥರಿಗೆ ಪರವಾಗಿಲ್ಲ. ಅವರು ಎಷ್ಟು ಬೇಕಾದರೂ ಕೊಟ್ಟು ಬೆಲೆ ಹೆಚ್ಚಾಗಿರುವ ಟಿಕೆಟ್ ಕೊಳ್ಳುತ್ತಾರೆ. ಆದ್ದರಿಂದ ಆದಷ್ಟು ಸಿನಿಮಾ ಕಡಿಮೆಯಾದರೆ ಜನರು ಬದುಕುತ್ತಾರೆ. ಮಧ್ಯಮ ತರಗತಿಯ ಜನರಲ್ಲಿ ಯುವಕ ಯುವತಿಯರು ಸಿನಿಮಾಕ್ಕೆ ಹೋಗಿ ಬಂದ ಮೂರನೆಯದಿನ ಅಲ್ಲಿ ನಟನಟಿಯರು ಧರಿಸಿದ್ದ ವೇಷಾಕಾಗಳನ್ನು ಅಪೇಕ್ಷೆ ಪಡುತ್ತಾರೆ. ರೋಲಾಕು, ಸೀರೆಗಳು ಸಿನಿಮಾದಲ್ಲಿ ನೋಡಿದಂಥವು ಬೇಕೆಂದು ಅಂಗಡಿಯಲ್ಲಿ ಹೋಗಿ ಗಲಾಟೆ ಮಾಡುತ್ತಾರೆ. 50 ರೂಪಾಯಿಗಳ ಸಂಬಳ ಬರುವ ಯುವಕರ ಗತಿ ಬಹಳ ಕಷ್ಟ. ಕಡಿಮೆ ಸಂಪಾದನೆಯಲ್ಲಿ ಇಂಥ ಸೀರೆಬೇಕು, ಅಂಥ ಸೀರೆಬೇಕು, ರೋಲಾಕು ಬೇಕು ಎಂದರೆ ಎಲ್ಲಿಂದ ತರಬೇಕು? ಹೆಂಗಸರ ಗಲಾಟೆ ಬಹು ಜೋರಾಗುತ್ತದೆ. ಹೀಗಿರುವುದರಿಂದ ಇಂಥ ಸಂದರ್ಭದಲ್ಲಿ ಜನರು ಹೋಗದಿರುವ ಹಾಗೆ ಎಷ್ಟು ತೆರಿಗೆ ಹೆಚ್ಚಿಸಿದರೆ ಅಷ್ಟೂ ನನಗೆ ಸಂತೋಷ. ಇದನ್ನು ನನ್ನ ಅನುಭವದಿಂದ ಹೇಳುತ್ತೇನೆ. ಗಂಡಸರ ಫ್ಯಾಷ್ಗಿಂತ ಹೆಂಗಸರು ಸೀರೆ ಉಡುವುದು ರೋಲಾಕು ಹಾಕುವುದು ಹೆಚ್ಚಿ ಕಷ್ಟ ಹೆಚ್ಚಿದೆ. ಆದ್ದರಿಂದ ದಯವಿಟ್ಟು ಈ ತೆರಿಗೆಯನ್ನು ಏನಾದರೂ ಮಾಡಿ ಇನ್ನೂ ಹೆಚ್ಚಿಸಬೇಕು.

Sri H. B. GUNDAPPA GOWDA.—I would like the Hon'ble Minister to make the position clear about the distributor and the exhibitor.

The Hon'ble Sri H. C. DASAPPA.—I have already made it clear that I expect the taxation to form part of the working expenses, in which case it will be shared between the distributor who collects a percentage of the realisations and the exhibitor. I am given to understand that that will be the proper procedure and that is likely to happen. Otherwise, it is open to the exhibitor to come to any understanding with the distributor. This does not contemplate taxing the distributor direct, and it is not possible, for the obvious reason that the distributor changes every week or every fortnight and we do not know which film man is distributing the film. The distributor is a single individual who will not carry on for a whole year.

Sri H. B. GUNDAPPA GOWDA.—There are a number of firms.

Sri M. GOVINDA REDDY.—The man who arranges the show will have to pay it. How can we make the distributor alone pay the tax?

The Hon'ble Sri H. C. DASAPPA.—As at present, the tax which we propose to collect is from the exhibitor and the distributor. It does not pretend to tax the distributor alone and we have evolved a formula which will make the distributor also share a portion of the tax and we expect that the tax would form part of the deductions that will be allowed by the distributor.

Sri H. B. GUNDAPPA GOWDA.—Will it at least be included in the Rules?

The Hon'ble Sri H. C. DASAPPA.—I do not think it will be profitable for us to discuss that aspect here. It does not pretend to tax the distributor alone. How far you can make two persons liable, the distributor on the one side and the exhibitor on the other, is a thing which will introduce complication and I think it better that the Hon'ble Members will do well to leave that matter alone. As regards the point made by Sri A. Bheemappa Naik that care should be taken to see that there is no evasion of tax, I can assure the House that the Rules will be so framed that it will be made as fool-proof as possible.

Sri S. RANGARAMIAH.—Can it not be recovered once a month in advance?

Mr. SPEAKER.—The question is. —

"That the Mysore Cinematograph Entertainment Tax Bill, 1951, as reported by the Select Committee, be taken into consideration."

The motion was adopted.

Mr. SPEAKER.—The House will now rise for lunch.

The Assembly adjourned for Lunch at Ten of the Clock and reassembled at Thirty Minutes past Ten of the Clock, Mr. Speaker (The Hon'ble Sri V. Venkatappa in the Chair).

Recommendation of His Highness for introduction of amendments to the Mysore Cinematographs Entertainment Tax.

Mr. SPEAKER (The Hon'ble Sri V. Venkatappa).—I will now read out the order received from His Highness the Maharaja of Mysore recommending the moving of certain amendments to the cinematograph Entertainment Tax Bill these amendments are the ones which will be moved by the Hon'ble Finance Minister.

ORDER.

In pursuance of clause (1) of Article 207 of the Constitution of India, I, Jaya Chamaraja Wadiyar, Maharaja of Mysore, do hereby recommend the moving of amendment to the Mysore Cinematograph Entertainment Tax Bill, 1951, in the Legislative Assembly and the consideration of the same by the said Assembly.

JAYA CHAMARAJA WADIYAR,
Maharaja of Mysore.

Mr. SPEAKER.—The clauses of the Bill will now be submitted to the Assembly. Clause 2.

The question is:

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3. The Hon'ble Minister may move his amendment.

The Hon'ble Sri H. C. DASAPPA.—Sir, I beg to move:

"That for sub-clause (1) of Clause 3, the following may be substituted."

"(1) There shall be charged, levied and paid to the Government a tax on Cinematograph shows, hereinafter referred to as the Cinematograph tax calculated at the rates, namely,—

Cinematograph shows liable for tax	Rate of tax per show		
	For places with a seating capacity not exceeding 500	For places with a seating capacity exceeding 500 but not exceeding 800	For places with a seating capacity exceeding 800
	Rs.	Rs.	Rs.
(a) Show other than those held with cinematograph apparatus and plant taken from place to place—			
(i) held in the Cities of Bangalore, Mysore and Davangere and in Kolar Gold Fields Sanitary Board area.	5	7	10
(ii) held in the Towns of Kolar, Tumkur, Chitaldrug, Shimoga, Chikmagalur, Hassan and Mandya.	3	5	7
(iii) held in any other area in the State.	2	3	4
(b) Shows held with cinematograph apparatus and plant taken from place to place.	Rs. 2 per show.		

Sir, there are some amendments for this clause; and in order to obviate further discussion and also enable the Hon'ble Members to know exactly what the financial implications of this could be, I would like to give a few figures. Under the original arrangement that we had, from the tax on seating capacity, we expected to get round about Rs. 10 lakhs. In Bangalore alone, it would exceed Rs. 7 lakhs. But now under this scheme we will be getting nearly about Rs. 6·11 lakhs for the whole State. So that I would think that it would be a very substantial reduction which the new proposals have secured for the cinema exhibitors, and to that extent it must be greatly welcome. I know that in this respect opinion is not at all uniform. There was considerable division of opinion. After all in respect of a measure of this kind we can only go by the greatest common measure of agreement and I think we have hammered

out a formula both with regard to the structure as well as the quantum of taxation which commands the largest measure of agreement and therefore I commend the amendment to the acceptance of this House.

Mr. SPEAKER.—Amendment moved.—

"That for sub-clause (1) of clause 3, the following may be substituted".—

"(1) There shall be charged, levied and paid to the Government a tax on Cinematograph shows, hereinafter referred as the Cinematograph tax calculated at the following rates, namely,"—

Cinematograph shows liable for tax	Rate of tax per show		
	For places with a seating capacity not exceeding 500	For places with a seating capacity exceeding 500 but not exceeding 800	For places with a seating capacity exceeding 800
	Rs.	Rs.	Rs.
(a) Shows other than those held with cinematograph apparatus and plant taken from place to place—			
(i) held in the Cities of Bangalore, Mysore and Davangere and in Kolar Gold Fields Sanitary Board area.	5	7	10
(ii) held in the Towns of Kolar, Tumkur, Chitaldrug, Shimoga, Chikmagalur, Hassan and Mandya.	3	5	7
(iii) held in any other area in the State.	2	3	4
(b) Shows held with cinematograph apparatus and plant taken from place to place.	Rs. 2 per show.		

Sri B. HUTCHE GOWDA.—Sir, I beg to move the amendment standing against my name. It reads as follows :-

"In the proposed amendment to sub-clause (1).

	For the figures	Substitute the figures
(a) (i)	5	3
	7	5
	10	6
(ii)	3	2
	5	3
	7	5
(iii)	2	1
	3	1½
	4	2
(b)	2	1"

ಸ್ವಾಮಿ. ಇದರಿಂದ ಎಷ್ಟು ತೊಂದರೆ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಶ್ರೀ ಭೀಮಪ್ಪನಾಯಕರೂ ಹೇಳಿದ್ದಾರೆ. ಆದಷ್ಟು ನಿಧಾನವಾಗಿ ಹಾಕಬೇಕೆಂಧೂ ಕಡಿಮೆ ಹಾಕಬೇಕೆಂದೂ ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿ ನಭೆಯವರು ಇಷ್ಟಾದರೂ ಕಡಿಮೆ ಮಾಡಿದ್ದಾರೆ, ಮುಂದೆ ಯಾವ ರೀತಿ ಇದು ಕೆಲಸ ಮಾಡುತ್ತದೆಂದು ನೋಡಿಕೊಂಡು ಸರ್ಕಾರದವರು ಮುಂದೆ ಹೇಗೆ ಮಾಡಬೇಕೆಂಬುದನ್ನು ಯೋಚನೆ ಮಾಡಬಹುದು. ಬೆಟ್ಟಿಂಗ್ ಟ್ಯಾಕ್ಸ್ ಮೊದಲು ಶೇಕಡ 8 ಇದ್ದುದು ಆ ಮೇಲೆ 20 ಆಯಿತು ಇದು ಹೊಸ ತೆರಿಗೆಯಾದುದರಿಂದ ಸ್ವಲ್ಪ ಮಟ್ಟಿಗೆ ಉದಾರ ನೀತಿಯನ್ನನುಸರಿಸುವುದು ಒಳ್ಳೆಯದೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಈ ತೆರಿಗೆ ಸಾಮಾನ್ಯವಾಗಿ ಡಿಸ್ಟ್ರಿಬ್ಯೂಟರುಗಳ ಮೇಲಾಗಲೀ ಎಗ್ಜಿಬಿಟರುಗಳ ಮೇಲಾಗಲೀ ಬೀಳುವುದಿಲ್ಲ. ಅವರು ಇದನ್ನು ಸಿನಿಮಾ ನೋಡತಕ್ಕವರ ಮೇಲೆ ಹಾಕುತ್ತಾರೆ. ಶ್ರೀ ರಂಗರಾಮಯ್ಯನವರು ಸಿನಿಮಾಗಳನ್ನೂ ಪ್ರೋತ್ಸಾಹಿಸಬಾರದು, ನಮ್ಮ ಮಕ್ಕಳು ಹೋಗಿ ನಮ್ಮ ಆರ್ಥಿಕ ಸ್ಥಿತಿ ಕೆಟ್ಟುಹೋಗುತ್ತದೆಂದು ಹೇಳಿದರು. ಸಿನಿಮಾ ನೋಡುವುದಕ್ಕೆ ಹೋದರೆ ಊಟ ಕಡಿಮೆ ಮಾಡಬೇಕಾಗುತ್ತದೆ ಅಥವಾ ಸಂಪೂರ್ಣವಾಗಿ ತಪ್ಪಿಸಬೇಕಾದರೆ ಒಟ್ಟಿಗೆ ಎಲ್ಲ ಸಿನಿಮಾ ಮುಚ್ಚಬೇಕು. ಇದನ್ನು ಬಿಟ್ಟು ತೆರಿಗೆಯನ್ನು ಹೆಚ್ಚಿಸಿದರೆ ಏನು ಪ್ರಯೋಜನ ! ಇದರಿಂದ ಜನರ ಹಣ ಹೆಚ್ಚು ಹೋಗುವುದಕ್ಕೆ ಅವಕಾಶವಿದೆಯೇ ಹೊರತು ಕಡಿಮೆ ಮಾಡಿದಂತಾಗುವುದಿಲ್ಲ. ಐವತ್ತು ರೂಪಾಯಿ ವರಮಾನ ಬರುವವರಿಗೆ ತೊಂದರೆ ಆಗುವುದಕ್ಕಿಂತ 80 ರೂಪಾಯಿ ವರಮಾನ ಬರುವವರಿಗೆ ಹೆಚ್ಚು ತೊಂದರೆಯಾಗಬಹುದು ಮಾನ್ಯ ಮಂತ್ರಿಗಳು ಹೇಗಾದರೂ ತೆರಿಗೆಯನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಮಾನ್ಯ ಸದಸ್ಯರೂ ಮನಸ್ಸು ಮಾಡಿದ್ದಾರೆ. ಪರೀಕ್ಷಾರ್ಥವಾಗಿಯಾದರೂ ಮುಂದೆ ಅನುಭವ ಪಡೆಯುವುದಕ್ಕೆ ಇದನ್ನು ಕಡಿಮೆ ಮಾಡುವ ನನ್ನ ತಿದ್ದುಪಡಿಯನ್ನು ನಭೆಯವರು ಅನುಮೋದಿಸುತ್ತಾರೆಂದು ನಿರೀಕ್ಷಿಸಿದ್ದೇನೆ.

Mr. SPEAKER.—Amendment moved.

"In the proposed amendment to sub-clause (1),

	For the figures	*Substitute the figures*
(a) (i)	5	3
	7	5
	10	6
(ii)	3	2
	5	3
	7	5
(iii)	2	1
	3	1½
	4	2
(b)	2	1"

Sri H. B. GUNDAPPA GOWDA.—There is also a small amendment of mine.

Sri K. PUTTASWAMY.—You may add further weight.

Sri H. B. GUNDAPPA GOWDA.—Not weight, but reason. My amendment reads as follows : —

"In the proposed amendment to sub-clause (1) (b), for the words and figures "Rs. 2 per show," the words and figures "Re. 1 per show" be substituted. "

ನನ್ನ ತಿದ್ದುಪಡಿಯಲ್ಲಿ ಶ್ರೀ ಹುಚ್ಚೇಗೌಡರ ತಿದ್ದುಪಡಿಯಲ್ಲಿರುವುದನ್ನೆಲ್ಲಾ ಸಾಮಾನ್ಯವಾಗಿ ಕೊಟ್ಟಿಲ್ಲ. 3ನೆಯ ಕ್ಲಾಜಿನ (b) ಭಾಗಕ್ಕೆ ಪೂರ್ತ ಸಂಬಂಧಪಟ್ಟದ್ದು. ಟೂರಿಂಗ್ ಟಾಕೀಸ್‌ಗೆ 2ರೂ ಪಾಯಿ ಹಾಕುವುದಕ್ಕೆ ಬದಲು ಒಂದು ರೂಪಾಯಿ ಹಾಕಿ ಎಂದು ಸೂಚಿಸಿದ್ದೇನೆ. ಟೂರಿಂಗ್ ಟಾಕೀಸ್ ವಿಚಾರವನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಇದರ ಅನುಭವ ನನಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮಾನ್ಯ ಸದಸ್ಯರಿಗೆ ಅನುಭವವಿದೆ ಎಂಬುದು ನನಗೆ ಗೊತ್ತಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬರೀ ಒಬ್ಬರ ವಿಚಾರ ನಾನು ಮಾತನಾಡುವುದಿಲ್ಲ. ಟೂರಿಂಗ್ ಟಾಕೀಸ್‌ನ ಪ್ರತಿನಿಧಿಗಳು ನನ್ನಲ್ಲಿ ಬಂದಿದ್ದರು. ಟೂರಿಂಗ್ ಟಾಕೀಸ್ ವಿಚಾರವನ್ನು ಯಾರೂ ಮಾತ ನಾಡುವವರಿಲ್ಲವೆಂದು ಈ ಕೆಲಸವನ್ನು ನಾನು ತೆಗೆದು ಕೊಂಡಿದ್ದೇನೆ. ತೆರಿಗೆ ಹಾಕಬೇಡಿ ಎಂದು ನಾವು ಈಗ ಹೇಳುವುದಿಲ್ಲ. ಈ ಟೂರಿಂಗ್ ಟಾಕೀಸ್ ವಿಚಾರ ದಲ್ಲಿ ಮಾತನಾಡುವುದಕ್ಕೆ ಸರಿಯಾದ ಕಾರಣವಿದೆ. 3ನೆಯ ಕ್ಲಾಜಿನ (a) (iii) ರಲ್ಲಿ held in any other area in the State ಎಂದಿದೆ, ಎಂದರೆ (ii) ರಲ್ಲಿರುವ ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಮಂಡ್ಯ ಈ ಸ್ಥಳಗಳಲ್ಲದೆ ಇತರ ಕಡೆ ಎಷ್ಟೋ ದೊಡ್ಡ ಸಿನಿಮಾ ಮಂದಿರಗಳಿರಲಿ. ಅವು ಎಷ್ಟೋ ಚೆನ್ನಾಗಿರಲಿ ಅವುಗಳ ನ್ನೆಲ್ಲಾ ಒಂದೇ ಸಮ ಮಾಡಿದ್ದಾರೆ, ಅವಕ್ಕೆಲ್ಲಾ ಒಂದೇ ದರ. ಟೂರಿಂಗ್ ಟಾಕೀಸ್‌ಗೂ 2 ರೂಪಾಯಿ ಈ ಟೂರಿಂಗ್ ಟಾಕೀಸ್‌ಗೆ ತೊಂದರೆಗಳು ಹೆಚ್ಚು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದಕ್ಕೆ 400 ರೂಪಾಯಿ ಖರ್ಚಾಗುತ್ತದೆ. ಮೂರು ತಿಂಗಳ ಮೇಲೆ ಲೈಸನ್ಸ್ ಕೊಡುವುದಿಲ್ಲ ! ಸಾಮಾನ್ಯವಾಗಿ ಒಂದೇ ತಿಂಗಳಿಗೆ ಕೊಡುತ್ತಾರೆ. ಮಳೆಗಾಲ ಬಂದರೆ ಆಹೊತ್ತು ಷೋ ಇರುವುದಿಲ್ಲ, ನಿಲ್ಲಿಸಬೇಕಾಗುತ್ತದೆ. ಷೋ ಮೇಲೆ ಹಾಕುತ್ತಾರೆ. ಆದರೆ ಅವರು ಇಟ್ಟು ಕೊಂಡಿರುವ ಖರ್ಚು ತಿಂಗಳು ತಿಂಗಳಿಗೂ ಮಾಡಲೇ ಬೇಕು. ಖಾಯಂ ಥಿಯೇಟರ್‌ಗಳಿಗೆ ಈ ರೀತಿ ತೊಂದರೆಗಳ್ಯಾವುವೂ ಇರುವುದಿಲ್ಲ. ಒಂದೇ ಜಾಗದಲ್ಲಿ ರುತ್ತವೆ. ಟೂರಿಂಗ್ ಟಾಕೀಸ್‌ಗಳು ಬೇರೆ ಬೇರೆ. ಸ್ಥಳಗಳಿಗೆ ಹೋಗುತ್ತವೆ ಒಂದೊಂದು ಜಾಗದಲ್ಲಿ ಅಲ್ಲಿಯ ಮುನಿಸಿಪಾಲಿಟಿಯವರು ಮನಸ್ಸು ಬಂದ ಹಾಗೆ ದಿನಕ್ಕೆ ಎಂಟು ರೂಪಾಯಿ, ಹತ್ತು ರೂಪಾಯಿ ಹೀಗೆಲ್ಲಾ ಸುಂಕ ಹಾಕುತ್ತಾರೆ. ದಿನಕ್ಕೆ ಹತ್ತು ರೂಪಾಯಿ ಆದರೆ ತಿಂಗಳಿಗೆ 300 ರೂಪಾಯಿ ಆಯಿತು ತಾವೇ ಸ್ವಲ್ಪ ಯೋಚನೆ ಮಾಡಿ ಅವರು entertainment tax ಅಲ್ಲದೆ ಖಾಯಂ ಸಿನಿಮಾ ಕಂಪೆನಿಗಳವರೂ ಕೊಡದೆ ಇರುವ ಮುನಿಸಿಪಾಲಿಟಿ ಯವರು ಹಾಕತಕ್ಕ ತೆರಿಗೆ ಬೇರೆ ಕೊಡಬೇಕಾಗಿದೆ. ಮುನಿಸಿಪಾಲಿಟಿಯವರು ಈ ತೆರಿಗೆಯನ್ನು ಹಾಕುವುದೂ ಕೂಡ House tax ಹಾಕುವ ರೀತಿಯಲ್ಲಿ ಹಾಕಿಬಿಡು ತ್ತಾರೆ. ಈ ಪ್ರಕಾರ ನೀವು ಹಾಕುವ ತೆರಿಗೆ, ಮಳೆ ಯೇನಾದರೂ ಬಂದರೆ ಉಂಟಾಗುವ ನಷ್ಟ ಜೊತೆಗೆ ಸ್ಥಳದಲ್ಲಿ ಹಾಕತಕ್ಕ ಕಂದಾಯ—ಇವಿಷ್ಟನ್ನೂ ಅವು ನಹಿಸಿಕೊಳ್ಳಬೇಕಾಗಿದೆ. ಆದರಿಂದ ನೀವು ಇವುಗಳನ್ನು ಮಿಕ್ಕ ಸಿನಿಮಾಗಳವರನ್ನೂ ಒಂದೇ ವಿಧದಲ್ಲ classify ಮಾಡುವುದು ಸರಿಯಲ್ಲ. ಈ ಟೂರಿಂಗ್ ಟಾಕೀಸ್‌ಗಳು ದಿನಕ್ಕೆ 2 ಆಟಗಳನ್ನು ತೋರಿಸಿದರೂ ತಿಂಗಳಿಗೆ 120 ರೂಪಾಯಿಗಳಾದಂತಾಯಿತು. ಅಲ್ಲ ಸೀಟಿಂಗ್ ಕೆಪಾಸಿಟಿಯೂ ಆಷ್ಟು ಹೆಚ್ಚಿಗೆ ಇರುವುದಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸೀಟ್‌ಗಳೆಂಬುದೇ ಇರುವುದಿಲ್ಲ! ಗ್ಯಾಲರಿ ಎಂದು ಮಾಡಿರುತ್ತಾರೆ; ಎಷ್ಟು ಜನರು ಬೇಕಾದರೂ ಕುಳಿತುಕೊಳ್ಳಬಹುದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆರ್ಥಿಕ ಸಚಿವರು ತಿದ್ದುಪಡಿ ನಾಯ್ಯವಾಗಿದ್ದರೆ ಒಪ್ಪುತ್ತೇನೆಂದು ಹೇಳಿದರು. ಈಗ ನಾನು ಹೇಳಿರುವ ಮೇರೆಗೆ ಈ ತೆರಿಗೆ ಆ ಟೂರಿಂಗ್ ಟಾಕಿಗಳಿಗೆ ಎಷ್ಟು ಹೆಚ್ಚಿನ ಹೊರೆಯಾಗುತ್ತದೆಂಬುದನ್ನು ತೋರಿಸಿದ್ದೇನೆ. ವರ್ಷ ವರ್ಷದ ಖರ್ಚು (recurring expenditure) ಎಷ್ಟಿದೆಯೆಂಬುದನ್ನೂ ನೋಡುವುದಾದರೆ, ಒಂದು ವರ್ಷಕ್ಕೆ ಒಂದು ಡೇರ ಹೊಸದಾಗಿ ಹೊಲಿಸಬೇಕಾಗುತ್ತವೆ. ಅದಕ್ಕೆ 1,200ಗಜ ಬೇಕಾಗುತ್ತದೆ, ಅಂದರೆ 1,500 ರೂಪಾಯಿಗಳಾಯಿತು ಇಷ್ಟೆಲ್ಲಾ ಕಷ್ಟ ನಷ್ಟಗಳಿರುವಾಗ ಈ ನಂತೆ ತಿರುಗುವವರಿಗೆಲ್ಲಾ ಹಿಡಿದು ಹೀಗೆ ತೆರಿಗೆ ವಿಧಿಸುವುದು ಸರಿಯಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು — ಮುನಿಸಿಪಾಲಿಟಿಯವರು ground rent ಎಂದು 10 ರೂಪಾಯಿ ಹಾಕುತ್ತಾರೆ, ಅಷ್ಟೆ ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—10 ರೂಪಾಯಿಯೆನ್ನುವುದು ದಿನಕ್ಕೆ ತಿಂಗಳಿಗಲ್ಲ.

Mr. SPEAKER—Amendment moved :

" In the proposed amendment to sub-clause (1) (b), for the words and figures 'Rs. 2 per show' the words and figures ' Re. 1 per show be substituted. "

Sri V. M. MASCARENHAS (Bangalore Retroceded Area-General)—Sir, I oppose both the amendments and in doing so I will take up the amendment of the Hon'ble Member Sri B. Hutche Gowda. First he began by saying that there should be no taxation at all. If that is his contention it would be something. But then he suggests that the figure recommended by the Select Committee should be revised. These taxations are not heavy and as the Hon'ble Members will kindly see, for a seating accommodation of 500 the tax suggested is Rs. 5 ; in other words two ordinary pies per seat. I do not think that a cinema exhibitor would like to put extra two pies on the cinema-goer in the present state of things. He would rather pay it himself than tax the

cinema-goer. From his own standpoint, the income that a cinema exhibitor earns during a year is fairly high as is our own experience both in cities and towns.

Sri H. B. GUNDAPPA GOWDA.—He has to pay tax also.

Sri V. M. MASCARENHAS.—True, the cinemas as we see are generally overcrowded. Some of the good pictures fetch an income to the tune of thousands and so a small taxation of this kind is amply justified. Therefore I do not feel the need to revise the figures suggested by the Select Committee.

Regarding the contention of the Hon'ble Sri H. B. Gundappa Gowda that the touring cinemas should be given the further privilege by reducing the tax by one rupee, I say that after all, between Rs. 2 and Re. 1 the difference is negligible and if touring cinemas as he himself admitted are undergoing many charges the total expenditure of which runs to hundreds, an extra rupee per day is not going to be an additional burden.

Sri H. B. GUNDAPPA GOWDA.—Rs. 120 per month; daily two shows.

Sri V. M. MASCARENHAS.—According to you it is Rs. 60; according to us it is Rs. 120.

Sri H. B. GUNDAPPA GOWDA.—Any less burden would be enough.

Sri V. M. MASCARENHAS.—With these remarks I feel that the Select Committee report should be adopted *in toto*.

The Hon'ble Sri H. C. DASAPPA.—Mr. Speaker, Sir, evidently the movers of the amendments have not secured any support at the hands of the House. It looks as though the mover Sri B. Hutche Gowda was not very serious in advancing his amendment. I suppose he has fulfilled his purpose by bringing in some amendment for the taxation measure.

Sri B. HUTCHE GOWDA.—I am always sincere.

The Hon'ble Sri H. C. DASAPPA.—The Hon'ble Member has played his part quite all right and has justified his place in the Opposition.

I really do not know what to answer. The net effect of Sri Hutche Gowda's amendment is that the income of 6.11 lakhs which our proposal would secure would be reduced to 3.88 lakhs.

Sri B. HUTCHE GOWDA.—The Hon'ble Minister said that the income would be nearly Rs. 10 lakhs.

The Hon'ble Sri H. C. DASAPPA.—That is according to the original Bill. According to the Select Committee's recommendation it is 6.11 lakhs and according to the Hon'ble Member's amendment it would be 3.88 lakhs. My point is, we could as well not think of having this tax at all because we secure a certain amount of odium by taxation while we do not get any substantial benefit to the coffers of the exchequer. It is not a wise thing to meddle or tinker with it and get all the displeasure and odium without getting anything in return. Either you must tax and get substantial return even though you incur some odium or do not tax and do not get any odium. That would be a correct policy. Here is a measure which found large agreement among the members here and I can quote the figures of Madras and Bombay: they take twenty-five per cent, thirty per cent, thirty-five per cent of the collections and this will not come anywhere near those figures. The rate is progessive according to the value of the tickets. There is no such thing here.

Sri H. B. GUNDAPPA GOWDA.—Is there any percentage worked out of the total income Government are getting by way of entertainment tax?

The Hon'ble Sri H. C. DASAPPA.—We are now getting about Rs. 5 lakhs from the other tax. Entertainment tax goes to the local bodies. This I have said is Rs 6.11 lakhs.

Sri. H B. GUNDAPPA GOWDA.—Have you got any idea of the percentage you get over the income that the cinemas get?

The Hon'ble Sri H. C. DASAPPA.—It depends on the picture. If the picture is a good one the cinemas get more; if the theatre is located in a good place, they get more. It is certain that this will bear a small proportion to our

(THE HON'BLE SRI H. C. DASAPPA).

income. I may disclose to the Hon'ble Members of the House that I have got a representation from the cinema exhibitors. They say that they have got to pay a series of charges and taxes like income-tax, super-tax, for electricity, licence, water consumption, advertisement, police, entertainment tax and so on. They include income-tax and super-tax also. I take it that income-tax is paid on income. Super-tax is paid on greater income. Is that a reason that because they have to pay income-tax and super-tax they should not pay this small levy? The inconsistency of their argument is obvious. Income-tax and super-tax could only be paid if there is decent income and when they are earning decent sums. Therefore I would beseech the House to accept the amendment.

ಶ್ರೀ ಬಿ. ಹುಚ್ಚೇಗೌಡರು.—ಪೋಲೀಸಿನವರ ರಕ್ಷಣೆಯನ್ನು ಪಡೆದು ನೀವು ಎಲ್ಲಾ ಜನರಿಗೂ ಕೊಡುವಂತೆ ಅವರಿಗೂ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಅಂಥಾದ್ದರಲ್ಲಿ ಅದಕ್ಕೆ ಬೇರೆ ನೀವು ವಿಧಿಸುತ್ತೀರಲ್ಲವೇ?

The Hon'ble Sri H. C. DASAPPA.—That applies to all entertainments. For these reasons I am sorry I am unable to accept the amendment of Sri B. Hutche Gowda.

As regards the amendment of Sri H. B. Gundappa Gowda, I took all the trouble to consider whether it is worthwhile to accept it. I think Sri Mascaranhas has rightly answered that point.

Sri H. B. GUNDAPPA GOWDA.—When I am telling the Hon'ble Member that it does, is that the way of meeting the argument?

The Hon'ble Sri H. C. DASAPPA.—No, no. All that I have got to say is that after all it would not lay heavily on these touring talkies. They get into out-of-the way places and they make good bit of money. I have seen people having made a good fortune out of these touring talkies. It is not correct to say that these touring talkies do not make any money. Therefore, Sir, I am unable to accept the amendment of Sri Gundappa Gowda.

Mr. SPEAKER.—What does the Hon'ble Member propose to do with the amendment?

Sri H. B. GUNDAPPA GOWDA.—They have made up their mind not to accept.

The Hon'ble Sri H. C. DASAPPA.—Excuse me. Sir,.....

Sri H. B. GUNDAPPA GOWDA.—I beg leave of the House to withdraw.

The amendment was, by leave of the House, withdrawn.

Sri B. HUTCHE GOWDA.—I press the amendment.

Mr. SPEAKER.—The question is:

"In the proposed amendment to sub-clause "(1),

FOR THE FIGURES, SUBSTITUTE THE FIGURES

(a) (i)	5	3
	7	5
	10	6
(ii)	3	2
	5	3
	7	5
(iii)	2	1
	3	1½
	4	2
(b)	2	1

The motion was negatived.

Mr. SPEAKER.—The question is:

For sub-clause (1) substitute the following:—

"(1) There shall be charged, levied and paid to the Government a tax on Cinematograph shows, hereinafter referred as the Cinematograph tax calculated at the following rates, namely:—

Cinematograph Shows liable for tax	Rate of tax per Show		
	For Cinemas with a seating capacity not exceeding 500	For cinemas with a seating capacity exceeding 500 but not exceeding 800	For cinemas with a seating capacity exceeding 800
	Rs.	Rs.	Rs.
(a) Shows other than those held with cinematograph apparatus and plant taken from place to place—			
(i) held in the cities of Bangalore, Mysore and Davangere and in Kolar Gold Fields Sanitary Board area.	5	7	10
(ii) held in the Towns of Kolar, Tumkur, Chitaldrug, Shimoga, Chikmagalur, Hassan and Mandya.	3	5	7
(iii) held in any other area in the State.	2	3	4

(b) Shows held with cinematograph apparatus and plant taken from place to place	...	Rs. 2 per show.

The motion was adopted.

Mr. SPEAKER.—The question is:

"That Clause 3, as amended, stand part of the Bill."

The motion was adopted.

Clause 3, as amended, was added to the Bill.

Mr. SPEAKER.—Clauses 4 to 9, both inclusive. The question is:

"That Clauses 4 to 9, both inclusive, stand part of the Bill".

The motion was adopted.

Clauses 4 to 9, both inclusive, were added to the Bill.

Mr. SPEAKER.—Clause 1. There is an amendment by the Hon'ble Minister.

The Hon'ble Sri H. C. DASAPPA.—I beg to move:

"That in sub-clause (3) for the words and figures on the first day of April 1951" substitute the words "at once."

This is because the first of April is over and now it will have to come into effect as soon as it receives the assent of His Highness. It is only a formal amendment.

Mr. SPEAKER.—The question is:—

"That in sub-clause (3) for the words and figures "on the first day of April 1951" substitute the words "at once."

The motion was adopted.

Mr. SPEAKER.—The question is:

"That Clause 1, as amended, stand part of the Bill."

The motion was adopted.

Clause 1, as amended, was added to the Bill.

Mr. SPEAKER.—There is another amendment.

The Hon'ble Sri H. C. DASAPPA.—I beg to move:

"That for the words 'Cinematograph Entertainment' or 'Cinematograph Entertainments' wherever they occur in the Bill, substitute the words 'Cinematograph Show' or 'Cinematograph Shows'."

This is because for one thing we have made this a tax on shows and for another, let there be no confusion between the entertainment tax as is known already and the present tax. Therefore, we have thought it advisable to imply this terminology 'Cinematograph Shows' instead of 'Cinematograph Entertainment'.

Mr. SPEAKER.—Amendment moved:

"That for the words 'Cinematograph Entertainment' or 'Cinematograph Entertainments' wherever they occur in the Bill, substitute the words "Cinematograph Show, or 'Cinematograph Shows"."

The motion was adopted.

Mr. SPEAKER.—Title and Preamble. The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to Pass.

The Hon'ble Sri H. C. DASAPPA.—I beg to move:

"That the Mysore Cinematograph Entertainments Tax Bill, 1951, as amended, be passed."

Mr. SPEAKER.—The question is:

"That the Mysore Cinematograph Entertainments Tax Bill, 1951, as amended, be passed."

The motion was adopted.

The Mysore Village Panchayets and District Boards Bill, 1951.

Select Committee Report presented.

The Hon'ble Sri R. CHENNIGARAMIAH (Minister for Local-Self-Government).—Sir, I beg to present the Report of the Select Committee on the Mysore Village Panchayets and District Board Bill 1951."